



ಯಾಜ್ಞವಲ್ಕ್ಯ ಮಂದಿರ




ಸಹಚಾರಣಿಗರೊಂದಿಗೆ ಲೇಖಕ

ಹತ್ತಬೇಕು. ಕೆಲವೊಂದು  ಜಾಗದಲ್ಲಿ ಆಯ ತಪ್ಪಿದರೆ ಪಾತಾಳ ಗ್ಯಾರಂಟಿ. ಊರುಗೋಲಿನ ಸಹಾಯವಿಲ್ಲದೆ ಚಾರಣ ಸಾಧ್ಯವಿಲ್ಲ. ಪ್ರತೀ ಸಲ ಕೋಲನ್ನು ಮುಂದೆ ಊರಿ ಭದ್ರ ಮಾಡಿಕೊಂಡು ಹೆಜ್ಜೆ ಮುಂದಿಡಬೇಕು.

ನಮ್ಮ ಜೊತೆ ಮೂವರು ಗೈಡ್‌ಗಳಿದ್ದರು. ಬಹಳ ಜಾಗರೂಕತೆಯಿಂದ ನಮ್ಮನ್ನು ಕರೆದೊಯ್ದರು. ವಿಪರೀತ ಶೀತ, ಗಾಳಿ. ಒಂದು ರೀತಿಯ ಭಯವೂ ಆವರಿಸಿತ್ತು. ಎರಡು ಗಂಟೆ ಕಾಲ ಹಿಮಪಾತದಲ್ಲೇ ಚಾರಣ ಮಾಡಿ ಸರ್‌ಪಾಸನ್ನು ಬೆಳಗಿನ 7 ಗಂಟೆಗೆ ತಲುಪಿದೆವು. ಎಲ್ಲರೂ ರೋಮಾಂಚನಗೊಂಡಿದ್ದರು. ಕೆಲವರು ಕೂಗಾಡಿ, ಕಿರುಚಾಡಿದರು. ಹಿಮದಲ್ಲಿ ಆಟವಾಡಿದೆವು. ನಮ್ಮ ಸಂಭ್ರಮ ಹೇಳತೀರದು.

ಇದೊಂದು ಸುತ್ತಲೂ ಬಿಳಿಯ ಹಿಮದ ಮರಳುಗಾಡು! ಸರ್ ಅಂದರೆ ಕೆರೆ, ಪಾಸ್ ಅಂದರೆ ದಾರಿ. ಇಲ್ಲೊಂದು ಕೆರೆ ಇದೆ, ಅದು ಹಿಮದಿಂದ ಮುಚ್ಚಿ ಹೋಗಿದೆ. ಸ್ಥಳೀಯ ಜನರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲು ಹತ್ತಿರದ ಒಳದಾರಿಗಳನ್ನು ಬಳಸುತ್ತಾರೆ. ಇದನ್ನೇ ಪಾಸ್ ಎನ್ನುತ್ತಾರೆ.

ಬಿಸಿಲಿನ ಪ್ರಖರತೆ ನಿಧಾನವಾಗಿ ಏರುತ್ತಿತ್ತು. ಮುಂದೆ ಸಣ್ಣ ಬೆಟ್ಟ, ಮತ್ತೆ ಇಳಿಜಾರು. ಗೈಡ್‌ಗಳು ತಮ್ಮ ಸಲಕರಣೆಯಿಂದ ದಾರಿ ಮಾಡುತ್ತಿದ್ದರು. ಇಲ್ಲಿಯ ಚಳಿಯಂತೆ ಬಿಸಿಲೂ ವಿಚಿತ್ರ. ಕಪ್ಪು, ತಂಪು ಕನ್ನಡಕ ಇಲ್ಲದೇ ಹೋದರೆ ಕಣ್ಣಿಗೆ ಅಪಾಯ ಗ್ಯಾರಂಟಿ. ಮೈಪೂರ್ತಿ ಬಟ್ಟೆಯಿಂದ ಮುಚ್ಚಿಕೊಳ್ಳಬೇಕು. ನಾವೆಲ್ಲರೂ ಒಂದೇ ದಿವಸದಲ್ಲಿ ಬಿಸಿಲಿಗೆ ಕಪ್ಪಾಗಿ ಕರಟಿ ಹೋಗಿದ್ದೆವು.

ಬಿಸ್ ಕೆರಿ ಟಾಪ್ ಅತ್ಯಂತ ಎತ್ತರ ಬೆಟ್ಟ. ಮೊದಲು ಇಲ್ಲಿಂದಲೇ 3 ಕಿ.ಮೀ ದೂರದ ಬಿಸ್ ಕೆರಿ ಕ್ಯಾಂಪ್‌ನವರೆಗೆ ಹಿಮದಲ್ಲಿ ಜಾರಿಕೊಂಡು ಹೋಗುತ್ತಿದ್ದರಂತೆ. ಜಾಗತಿಕ ತಾಪಮಾನದ ಏರಿಕೆಯ ಬಿಸಿಯಿಂದ  ಈ ಜಾಗದಲ್ಲಿ ಈಗ ಮೊದಲಿನಷ್ಟು ಹಿಮವಿಲ್ಲ. ನಾವು ಬೆಟ್ಟದಿಂದ ಸ್ವಲ್ಪ ದೂರದವರೆಗೆ ಇಳಿದು ಅಲ್ಲಿಂದ ಒಂದು ಕಿ.ಮೀ. ದೂರದವರೆಗೆ ಜಾರಿಕೊಂಡು ಹೋದೆವು. ಮಧ್ಯಾಹ್ನ ಊಟದ ನಂತರ ಇಳಿಜಾರಿನ ಸಂದುಗಳಲ್ಲಿ ಕಲ್ಲಿನ ಕೊರಕಲಿನಲ್ಲಿ ನಮ್ಮ ನಡಿಗೆ. ಸಂಜೆ ನಾಲ್ಕರ ಹೊತ್ತಿಗೆ ಸುಂದರ ಹಿಮ ಕಣಿವೆಯ ತಳದಲ್ಲಿ ಸುತ್ತಲೂ ಹಸಿರಿನಿಂದ ಕಂಗೊಳಿಸುತ್ತಿದ್ದ ಬಿಸ್ ಕೆರಿ ಕ್ಯಾಂಪ್ ತಲುಪಿದೆವು. ಅವತ್ತು ಒಟ್ಟು 12 ಗಂಟೆಗಳ ದೀರ್ಘ ಚಾರಣ!

ಮರುದಿನ ಬಂಡಕ್ ತಾಜ್ ಕ್ಯಾಂಪಿನೆಡೆಗೆ. ಇನ್ನು ಪರ್ವತ ಹತ್ತುವ ಶ್ರಮ ಇಲ್ಲ. ಇಳಿಜಾರಿನಲ್ಲಿ ಇಳಿದು 5–6 ಗಂಟೆಯ ಬಳಿಕ ಬಂಡಕ್ ತಾಜ್ ತಲುಪಿದೆವು. ಸುತ್ತಲೂ ಗಿರಿ ಶಿಖರಗಳು. ದೂರದಲ್ಲೊಂದು ಜಲಪಾತ. ಕೆಲವು ಗೌಳಿಗರು ದನಕರುಗಳನ್ನು ಮೇಯಿಸುತ್ತಿದ್ದರು. ಇವರು ಕೆಳಗಿನ ತಪ್ಪಲುಗಳಿಂದ ಮೇಲಕ್ಕೆ ಹಸಿರು ಹುಲ್ಲನ್ನು ಹುಡುಕಿಕೊಂಡು ಬರುತ್ತಾರೆ. ಇಲ್ಲಿಯೇ ಕೆಲವು ದಿನ ತಂಗುತ್ತಾರೆ. ಇಲ್ಲಿಂದಲೇ ಹಾಲು ಮತ್ತು ಅದರ ಇತರ ಉತ್ಪನ್ನಗಳನ್ನು ದೂರದ ತಪ್ಪಲುಗಳಿಗೆ ನಡೆದೇ ಹೋಗಿ ವಿತರಿಸುತ್ತಾರೆ.

ಹತ್ತನೆಯ ದಿನ ಬೇಸ್ ಕ್ಯಾಂಪ್ ಕಡೆಗೆ ಇಳಿಜಾರಿನಲ್ಲಿ ಸಾಗುತ್ತಿರುವಾಗ 2–3 ಜನ ಕುದುರೆಯಲ್ಲಿ ಸಾಮಾನು ಹೇರಿಕೊಂಡು ಬಂದೂಕು ಹಿಡಿದುಕೊಂಡು ಬರುತ್ತಿದ್ದರು. ಇವರು ಮೇಲಿನ ಪರ್ವತಗಳಿಗೆ ಗಿಡಮೂಲಿಕೆಗಳನ್ನು ತರಲು ಹೊರಟವರು. ಇವರೂ ಹಲವಾರು ದಿನಗಳ ಕಾಲ ಗಿರಿಶಿಖರಗಳಲ್ಲಿ ಟೆಂಟ್‌ನಲ್ಲಿ ವಾಸ ಮಾಡಿ ಗಿಡಮೂಲಿಕೆಗಳನ್ನು ಸಂಗ್ರಹಿಸಿ 15 ದಿವಸ ಬಿಟ್ಟು ಕೆಳಗಿನ ತಪ್ಪಲಿಗೆ ಬಂದು ವ್ಯಾಪಾರಿಗಳಿಗೆ ಮಾರಿ ಪುನಃ ಪರ್ವತ ಹತ್ತುತ್ತಾರೆ. ಹೆಚ್ಚಾಗಿ ಕರಡಿಗಳಿಂದ ಆಗುವ ದಾಳಿಯನ್ನು ತಪ್ಪಿಸಲು ಬಂದೂಕನ್ನು ಜೊತೆಗೆ ಒಯ್ಯುತ್ತಾರೆ.

ಮುಂದೆ ಪುಲ್ಗ ಎನ್ನುವ ಹಳ್ಳಿ ಸಿಕ್ಕಿತು. ಅಲ್ಲಿಂದ ಬರ್‌ಸೇನಿ. ಪಾರ್ವತಿ ನದಿಗೆ ಅಡ್ಡವಾಗಿ ವಿದ್ಯುತ್ ಉತ್ಪಾದನೆಗಾಗಿ  ಅಣೆಕಟ್ಟನ್ನು ಕಟ್ಟಿದ್ದಾರೆ. ಇಲ್ಲಿಂದ ಮಣಿಕರಣೆಗೆ ಬಸ್‌ನಲ್ಲಿ ಪ್ರಯಾಣ. ಪರ್ವತವನ್ನು ಕಡಿದು ಮಾಡಿದ ಸಪೂರ ರಸ್ತೆ. ಒಂದು ಬದಿಗೆ ಭೋರ್ಗರೆವ ಪಾರ್ವತಿ ನದಿ. ಒಂದು ಗಂಟೆಯ ಬಳಿಕ ಮಣಿಕರಣ್ ತಲುಪಿದೆವು. ಅಲ್ಲಿನ ಬಿಸಿನೀರಿನ ಬುಗ್ಗೆಯಲ್ಲಿ ಸ್ನಾನ ಮಾಡಿ ಸಿಖ್ಖರ ಗುರುದ್ವಾರದಲ್ಲಿ ಸ್ವಾದಿಷ್ಟ ಭೋಜನ ಮುಗಿಸಿ ಕಸೋಲ್ ಬೇಸ್ ಕ್ಯಾಂಪ್ ತಲುಪಿದೆವು. ಸಂಜೆ ನಡೆದ ಕಾರ್ಯಕ್ರಮದಲ್ಲಿ ಎಲ್ಲರನ್ನೂ ಅಭಿನಂದಿಸಿ ಪ್ರಮಾಣಪತ್ರ ನೀಡಿದರು.